## ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 50

ಉತ್ತರ ದಿನಾಂಕ : 29.01.2021

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಜನರಿಗೆ ಶುದ್ಧ ಕುಡಿಯುವ ನೀರಿನ ಸೌಲಭ್ಯ ಒದಗಿಸುವ ನಿಟ್ಟಿನಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪಿಸಲಾಗಿದ್ದು, ರಾಜ್ಯಾದ್ಯಂತ ಎಷ್ಟು ಘಟಕಗಳನ್ನು ಸ್ಥಾಪಿಸಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು) | ಜನರಿಗೆ ಶುದ್ಧ ಕುಡಿಯುವ ನೀರಿನ ಸೌಲಭ್ಯ ಒದಗಿಸುವ ನಿಟ್ಟಿನಲ್ಲಿ ಒಟ್ಟು 18728 ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಅನುಷ್ಠಾನಗೊಳಿಸಿದ್ದು, ಜಿಲ್ಲಾವಾರು ವಿವರಗಳನ್ನು **ಅನುಬಂಧ-1**ರಲ್ಲಿ ಲಗತ್ತಿಸಿದೆ. |
| ಆ) | ರಾಜ್ಯದಲ್ಲಿ ಸ್ಥಾಪಿಸಲಾದ ಶುದ್ಧ ಕುಡಿಯುವ ನೀರಿನ ಘಟಕಗಳೆಲ್ಲವೂ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿವೆಯೇ; | ರಾಜ್ಯದಲ್ಲಿ ಸ್ಥಾಪಿಸಲಾದ ಒಟ್ಟು ಶುದ್ಧ ಕುಡಿಯುವ ನೀರಿನ ಘಟಕಗಳಲ್ಲಿ 1538 ಘಟಕಗಳು ತಾತ್ಕಾಲಿಕವಾಗಿ ಕಾರ್ಯನಿರ್ವಹಿಸುತ್ತಿಲ್ಲ. ವಿವರಗಳನ್ನು **ಅನುಬಂಧ-1**ರಲ್ಲಿ ಲಗತ್ತಿಸಿದೆ. |
| ಇ) | ಸದರಿ ನೀರಿನ ಘಟಕಗಳ ನಿರ್ವಹಣೆಯ ಹೊಣೆಯನ್ನು ಯಾರಿಗೆ ವಹಿಸಲಾಗಿದೆ; | • ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ಇಲಾಖೆಯ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಟೆಂಡರ್ ಮುಖೇನ, ಕೆ.ಆರ್.ಐ.ಡಿ.ಎಲ್. ಸಂಸ್ಥೆ ಮುಖೇನ, ಸಹಕಾರ ಸಂಘ / ಸಂಸ್ಥೆ ಮುಖೇನ ಮತ್ತು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಇತರೆ ಅನುದಾನದಲ್ಲಿ ಅನುಷ್ಠಾನಗೊಳಿಸಿರುವ ಘಟಕಗಳ ಪೈಕಿ, ನಿರ್ವಹಣೆ ಅವಧಿ ಮುಗಿದಿರುವ / ನಿರ್ವಹಣೆ ಸಮಸ್ಯೆ ಇರುವ 9022 ಘಟಕಗಳನ್ನು ವಿವಿಧ ಪ್ಯಾಕೇಜ್‌ಗಳಾಗಿ ವಿಂಗಡಿಸಿ ಜಿಲ್ಲಾ ಮಟ್ಟದಲ್ಲಿ ನಿಯಮಾನುಸಾರ ಟೆಂಡರ್ ಕರೆಯಲಾಗಿದ್ದು, ಈಗಾಗಲೇ 7661 ನೀರು ಶುದ್ಧೀಕರಣ ಘಟಕಗಳಿಗೆ ಟೆಂಡರ್‌ನಂತೆ ಅನುಮೋದನೆಯಾದ ಸಂಸ್ಥೆ/ಗುತ್ತಿಗೆದಾರರಿಗೆ ಮುಂದಿನ 5 ವರ್ಷಗಳ ನಿರ್ವಹಣೆಗಾಗಿ ಹಸ್ತಾಂತರ ಮಾಡಲು ಕ್ರಮವಹಿಸಲಾಗಿದೆ. ಉಳಿದಂತೆ 1361 ಘಟಕಗಳನ್ನು ಗ್ರಾಮ ಪಂಚಾಯಿತಿಗಳಿಗೆ ನಿರ್ವಹಣೆಗಾಗಿ ಹಸ್ತಾಂತರಿಸಿದೆ.<br>• ಗ್ರಾಮ ಪಂಚಾಯಿತಿಗಳಿಗೆ ನಿರ್ವಹಣೆಗಾಗಿ ವಹಿಸಲಾದ ಘಟಕಗಳನ್ನು ಸುಸ್ಥಿತಿಯಲ್ಲಿಡಲು ಮಾಹೆಯಾನ ಪ್ರತಿ ಘಟಕಕ್ಕೆ ಇಲಾಖೆಯಿಂದ ರೂ.3000.00 ಗಳ ಅನುದಾನ ಒದಗಿಸಲಾಗುತ್ತಿದೆ ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ಇತರೆ ಅನುದಾನಗಳನ್ನು ಬಳಸಿ ಘಟಕಗಳನ್ನು ಸುಸ್ಥಿತಿಯಲ್ಲಿಡಲು ಕಾಲಕಾಲಕ್ಕೆ ಸೂಚನೆಗಳನ್ನು ಸಹ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ನೀಡಲಾಗುತ್ತಿದೆ. |

| | | |
|---|---|---|
| | | • ತಾತ್ಕಾಲಿಕವಾಗಿ ದುರಸ್ಥಿಯಲ್ಲಿರುವ ಎಲ್ಲಾ ಘಟಕಗಳನ್ನು ಗ್ರಾ.ಕು.ನೀ&ನೈ ಇಲಾಖೆಯ ವತಿಯಿಂದ ಟಾಸ್ಕ್‌ಫೋರ್ಸ್ ಹಾಗೂ ಇತರೆ ಅನುದಾನ ಬಳಸಿಕೊಂಡು, ದುರಸ್ಥಿಗೊಳಿಸಿ ಸಾರ್ವಜನಿಕರಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸಲು ಕ್ರಮ ಜರುಗಿಸಲಾಗುತ್ತಿದೆ. |
| ಈ) | ದುರಸ್ಥಿಗೆ ಬಂದ ಯಂತ್ರಗಳನ್ನು ಕ್ಲುಪ್ತ ಸಮಯದೊಳಗೆ ದುರಸ್ಥಿ ಮಾಡದಿರುವ ಬಗ್ಗೆ ಹಲವಾರು ದೂರುಗಳಿದ್ದು, ಇದರ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು? | Defect Liability Period ಮುಗಿಯುವುದರೊಳಗೆ ಕಾರ್ಯನಿರ್ವಹಿಸದೇ ಇದ್ದಲ್ಲಿ, ಅಂತಹ ಘಟಕಗಳನ್ನು ಸ್ಥಾಪಿಸಿದ ಏಜೆನ್ಸಿರವರಿಗೆ ಕರಾರಿನಂತೆ ನೋಟೀಸ್‌ಗಳನ್ನು ನೀಡಿ Rescind ಮಾಡಲು ಕ್ರಮವಹಿಸಲಾಗುತ್ತಿದೆ ಹಾಗೂ ಸದರಿ ಘಟಕಗಳನ್ನು ನಿಯಮಾನುಸಾರ ಇಲಾಖಾ ವತಿಯಿಂದ ಸರಿಪಡಿಸಿ ಕಾರ್ಯನಿರ್ವಹಿಸುವಂತೆ ಕ್ರಮಜರುಗಿಸಲಾಗುತ್ತಿದೆ. |

ಸಂ:ಗ್ರಾಕುನೀ&ನೈಇ 128 ಗ್ರಾನೀಸ(4)2020

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

| Annexure-1 | | | | |
|---|---|---|---|---|
| Sl. No. | District \ Division | No. of Plants Commissioned | No. of Plants Working | No. of Plants Not Working |
| 1 | Bagalkot | 780 | 707 | 73 |
| 2 | Bangalore Rural | 688 | 677 | 11 |
| 3 | Bangalore Urban | 714 | 660 | 54 |
| 4 | Belagavi / Chikodi | 1330 | 1239 | 91 |
| 5 | Bellary | 1129 | 1087 | 42 |
| 6 | Bidar | 291 | 189 | 102 |
| 7 | Chamarajnagar | 181 | 174 | 7 |
| 8 | Chikkaballapur | 734 | 714 | 20 |
| 9 | Chikkamagalur | 216 | 195 | 21 |
| 10 | Chitradurga | 1052 | 974 | 78 |
| 11 | Dakshina Kannada | 125 | 60 | 65 |
| 12 | .Davangere | 1343 | 1316 | 27 |
| 13 | Dharwad | 467 | 412 | 55 |
| 14 | Gadag | 439 | 421 | 18 |
| 15 | Hassan | 454 | 446 | 8 |
| 16 | Haveri | 750 | 716 | 34 |
| 17 | Kalaburgi | 442 | 300 | 142 |
| 18 | Kodagu | 36 | 26 | 10 |
| 19 | Kolar | 1077 | 1067 | 10 |
| 20 | Koppal | 666 | 523 | 143 |
| 21 | Mandya | 709 | 695 | 14 |
| 22 | Mysore | 606 | 548 | 58 |
| 23 | Ramanagar | 578 | 566 | 12 |
| 24 | Raichur | 616 | 560 | 56 |
| 25 | Shimoga | 255 | 251 | 4 |
| 26 | .Tumkur | 1508 | 1404 | 104 |
| 27 | Udupi | 59 | 56 | 3 |
| 28 | Uttar Kannada | 234 | 205 | 29 |
| 29 | Vijayapura | 834 | 647 | 187 |
| 30 | Yadgir | 415 | 355 | 60 |
| Total | | 18728 | 17190 | 1538 |